2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.

ಸಿ.ಸಿ.ಸಂಖ್ಯೆ 1105/2018

ಫಿರ್ಯಾದುದಾರರುಃ- ಸರ್ಕಾರದ ಪರವಾಗಿ ಸಖರಾಯಪಟ್ಟಣ ಪೊಲೀಸರು

ವಿರುದ್ಧ

ಆರೋಪಿತರುಃ- ವೆಂಕಟೇಶ ಮತ್ತು ಇತರರು

**ದೋಷಾರೋಪಣೆ**

ಶ್ರೀ ಸಿ.ಎನ್.ಚಂದನ್, ಬಿ.ಎಸ್‌ಸಿ, ಎಲ್.ಎಲ್.ಬಿ, 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ವೆಂಕಟೇಶ, ಬಿನ್ ಮಂಜಪ್ಪ, 30 ವರ್ಷ, ಆಟೋರಿಕ್ಷಾ ಚಾಲಕ, ವಾಸಃ ಹೊಸಸಿದ್ಧರಹಳ್ಳಿ ಗ್ರಾಮ, ಕಡೂರು ತಾಲ್ಲೂಕು.
2. ಮಂಜಪ್ಪ, ಬಿನ್ ಲೇಟ್ ನಂಜಪ್ಪ, 55 ವರ್ಷ, ವ್ಯವಸಾಯ, ವಾಸಃ ಹೊಸಸಿದ್ಧರಹಳ್ಳಿ ಗ್ರಾಮ, ಕಡೂರು ತಾಲ್ಲೂಕು.
3. ವೆಂಕಟೇಶ, ಬಿನ್ ದೊಡ್ಡಯ್ಯ, 35 ವರ್ಷ, ಕೂಲಿಕೆಲಸ, ವಾಸಃ ಮತ್ತಿಘಟ್ಟ ಗ್ರಾಮ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
4. ಶ್ವೇತ, ಕೋಂ ವೆಂಕಟೇಶ, 24 ವರ್ಷ, ಕೂಲಿಕೆಲಸ, ವಾಸಃ ಹೊಸಸಿದ್ಧರಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ 06.06.2018 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಸಖರಾಯಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ಹೊಸಸಿದ್ದರಹಳ್ಳಿ ಗ್ರಾಮದ ಅಣ್ಣಪ್ಪನವರ ವಾಸದ ಮನೆಯ ಪಕ್ಕದ ಪಂಚಾಯ್ತಿ ಕಚ್ಚಾರಸ್ತೆಯಲ್ಲಿ ಚಾಸಾ-1 ಅಣ್ಣಪ್ಪ ನಿಂತಿರುವಾಗ 1 ರಿಂದ 4 ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಅಲ್ಲಿಗೆ ಬಂದು ಚಾಸಾ-1 ರವರನ್ನು ಉದ್ದೇಶಿಸಿ, ಬೋಳಿಮಗನೇ, ಸೂಳೇಮಗನೇ, ನಮ್ಮ ಟ್ರ್ಯಾಕ್ಟರ್ ಡಿಕ್ಕಿ

ಹೊಡೆದಿಲ್ಲದಿದ್ದರೂ ಸುಳ್ಳು ಹೇಳಿ ಮೂವತ್ತು ಸಾವಿರ ರೂಪಾಯಿ ಕೊಡಿಸಿರುತ್ತೀಯಾ ಎಂದು ಅವಾಚ್ಯವಾಗಿ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ಸಹಕಲಂ 34 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ನಿಮ್ಮಗಳ ಸಮಾನ ಉದ್ದೇಶದಿಂದ 3ನೇ ಆರೋಪಿಯಾದ ನೀವು ಕಲ್ಲಿನಿಂದ ಚಾಸಾ-1ರವರ ತಲೆಯ ಎಡಭಾಗಕ್ಕೆ ಹೊಡೆದು ಹಾಗೂ 1 ಮತ್ತು 2ನೇ ಆರೋಪಿತರಾದ ನೀವು ದೊಣ್ಣೆಯಿಂದ ಚಾಸಾ-1ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ಸಹಕಲಂ 34 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು 1 ರಿಂದ 4ನೇ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1ರವರಿಗೆ ಇಷ್ಟಕ್ಕೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ನೀವು ಭಾರತೀಯ ದಂಡ ಸಂಹಿತೆಯ ಕಲಂ 506 ಸಹಕಲಂ 34 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: 06.02.2019

**-ಸಹಿ-**

**(ಸಿ.ಎನ್.ಚಂದನ್),**
**2 ನೇ ಹೆಚ್ಚುವರಿ ಪ್ರದನ್ಯಾದಂ ಕಡೂರು.**